<u>ದಿನಾಂಕಃ 07.11.2022 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಗಿದೆ</u>

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಸಿ.ಪಿ. ವಕೀಲರಿಂದಃ</u>

ದಿನಾಂಕ 30.09.2020 ರಂದು ಬೆಳಗ್ಗೆ 9.30 ಗಂಟೆ ಸಮಯದಲ್ಲಿ ನಾನು ಮನೆಯ ಒಳಗೆ ಇದ್ದೆ ಅಂತ ನಾನು ಹೇಳಿದ್ದೇನೆ ಎಂದರೆ ಸರಿ. ಮನೆಯಲ್ಲಿ ಎರಡು ಚಿಕ್ಕ ರೂಮುಗಳು ಇದೆ. ನಾನು ರೂಮ್ ನಲ್ಲಿ ಇರಲಿಲ್ಲ , ನಾನು ಹಜಾರದ ಮುಂಭಾಗದಲ್ಲಿ ಇದ್ದೆ. ನಾನು ನಿಪಿ.1 ದೂರಿನಲ್ಲಿ , "ದಿನಾಂಕ 30.09.2020 ರಂದು ಬೆಳಗ್ಗೆ ಸುಮಾರು 9.30 ಗಂಟೆ ಸಮಯದಲ್ಲಿ ನಾನು ಮತ್ತು ನಮ್ಮ ತಂದೆ ಸ್ವಾಮಿ ಇಬ್ಬರು ಮನೆಯ ಮುಂದೆ ಇರುವಾಗ " ಅಂತ ಹೇಳಿದ್ದೇನೆ. ಮನೆಯ ಮುಂಭಾಗದಿಂದ ನಾನು ನಿಂತಿದ್ದ ಜಾಗಕ್ಕೆ ಎಷ್ಟು ದೂರ ಇತ್ತು ಅಂತ ಹೇಳಲು ಆಗುವುದಿಲ್ಲ. ಮನೆಯ ಮುಂಭಾಗದಿಂದ ನಾನು ನಿಂತಿದ್ದ ಜಾಗಕ್ಕೆ ಅಂದಾಜು 10 ಅಡಿ ಇರಬಹುದಾ ಎಂಬ ಪ್ರಶ್ನೆಗೆ ಸಾಕ್ಷಿಯು 8 ಅಡಿ ಇರಬಹುದು ಅಂತ ಉತ್ತರಿಸುತ್ತಾರೆ. ಆರೋಪಿತರು ಅವರವರೆ ಅರಚಾಡುತ್ತಿದ್ದರು. ಆರೋಪಿತರು ನಮ್ಮ ಮತ್ತು ಅವರ ಮನೆಯ ಮುಂಭಾಗ ಇರುವ ಜಾಗದಲ್ಲಿ ಅರಚಾಡುತ್ತಿದ್ದರು. ನಾನು ನಿಂತುಕೊಂಡಿದ್ದ ಜಾಗದಿಂದ ಆರೋಪಿತರ ಮನೆಗೆ ಅಂದಾಜು 3 ರಿಂದ 4 ಅಡಿ ಅಂದರೆ 5 ಅಡಿ ಒಳಗೆ ಇರಬಹುದು. ನಿಪಿ.9 ಫೋಟೋದಲ್ಲಿ ಕಾಣುವಂತ ಮುಖ್ಯ ದ್ವಾರ ನಮ್ಮ ಮನೆ ಆಗಿರುತ್ತದೆ. ಸದರಿ ಫೋಟೋದಲ್ಲಿ ಮುಖ್ಯ ದ್ವಾರದ ಎಡಭಾಗದಲ್ಲಿ ಒಂದು ಕಿಟಕಿ ಇದೆ ಎಂದರೆ ಸರಿ. ಆರೋಪಿತರ ಮನೆ ಸದರಿ ಕಿಟಕಿ ಪಕ್ಕದಲ್ಲಿ ಇದೆ. ಸದರಿ ಕಿಟಕಿಯಿಂದ ಆರೋಪಿತರ ಮನೆಗೆ ಒಂದು ಮೊಳ ದೂರ ಆಗುತ್ತದೆ. ನಮ್ಮ ತಂದೆಗೆ ಏಟು ಬಿದ್ದಂತ ಜಾಗದಿಂದ ನಮ್ಮ ಮನೆಯ ಮುಖ್ಯ ದ್ವಾರಕ್ಕೆ ಒಂದರಿಂದ ಒಂದುವರೆಗೆ ಮಾರು ಒಳಗೆ ಇದೆ. ಪೊಲೀಸರು ನಮ್ಮ ಮನೆಯ ಪಕ್ಕದಲ್ಲಿ ಕಲ್ಲು ಬಿದ್ದಂತ ಜಾಗದಿಂದ ಮನೆಯ ಮುಂಭಾಗಕ್ಕೆ ಅಳತೆ ಮಾಡಲಿಲ್ಲ.

ನಾನು ಐ.ಟಿ.ಐ. ವ್ಯಾಸಂಗ ಮಾಡಿದ್ದೇನೆ. ವಸ್ತುಗಳ ತೂಕವನ್ನು ನನಗೆ ಅಂದಾಜಿನ ಮೇಲೆ ಹೇಳಲು ಬರುತ್ತದೆ ಎಂದರೆ ಸರಿ.ಈಗ ನ್ಯಾಯಾಲಯದ ಮುಂದೆ ಇರುವ ಮು.ಮಾ.6 ದಿಂಡುಗಲ್ಲು (ಸೈಜುಗಲ್ಲು) ವಿನ ತೂಕ ಅಂದಾಜು 10 ರಿಂದ 15 ಕೆ.ಜಿ ಇರಬಹುದು. ಮು.ಮಾ.6 ದಿಂಡುಗಲ್ಲಿನ ತೂಕ ಅಂದಾಜು 25 ರಿಂದ 30 ಕೆ.ಜಿ ಇದೆ ಎಂದರೆ ಗೊತ್ತಿಲ್ಲ. ಮು.ಮಾ.6 ದಿಂಡುಗಲ್ಲಿನ 25 ರಿಂದ 30 ಕೆ.ಜಿ ಇದೆ ಅಂತ ನನಗೆ ಗೊತ್ತಿದ್ದರೂ ಸಹಾ, ಅದರ ತೂಕ ಗೊತ್ತಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ಮೇಲೆ ಇದ್ದ ಟೆರೇಸ್ ಮೇಲಿಂದ ಮು.ಮಾ.6 ಕಲ್ಲು ಬಿದ್ದಂತ ಜಾಗಕ್ಕೆ ಒಂದರಿಂದ ಒಂದುವರೆ ಮಾರು ಒಳಗಡೆ ಇದೆ.

1ನೇ ಆರೋಪಿ ಶಂಕರ, ಮು.ಮಾ.6 ಕಲ್ಲನ್ನು ನನ್ನ ತಂದೆಯ ತಲೆಯ ಮೇಲೆ ಎಸೆದಂತ ಸಂದರ್ಭಲ್ಲಿ ಆರೋಪಿತರನ್ನು ಬಿಟ್ಟರೆ ಬೇರೆ ಯಾರ ಇರಲಿಲ್ಲ. 6 ಜನ ಆರೋಪಿತರು ಆ ಸಮಯದಲ್ಲಿ ನನ್ನ ತಂದೆಯ ಸುತ್ತಾ ಮುತ್ತಾ ಇದ್ದರು. ಮು.ಮಾ.6 ಕಲ್ಲು ಬೇರೆ ಯಾರ ಮೇಲೂ ಬೀಳಲಿಲ್ಲ. ಮು.ಮಾ.6 ಕಲ್ಲು ಬಿದ್ದಂತ ಜಾಗದಲ್ಲಿ ಭೂಮಿಗೆ ಗುರುತು ಬಿದ್ದಿತ್ತು. ಮು.ಮಾ.6 ಕಲ್ಲಿನ ಯಾವ ಭಾಗ ಭೂವಿಯ ಮೇಲೆ ಬಿದ್ದು ಗುರುತು ಆಗಿತ್ತು ಅಂತ ಎಂಬುದನ್ನು ನಾನು ಗಮನಿಸಲಿಲ್ಲ. ಮು.ಮಾ.6 ಕಲ್ಲಿನ ಯಾವ ಮೂಲೆಯಲ್ಲಿ ರಕ್ತ ಇತ್ತು ಎಂಬುದನ್ನು ನಾನು ಗಮನಿಸಲಿಲ್ಲ, ಸಾಕ್ಷಿ ಸ್ವತೀ ನುಡಿಯತ್ತಾರೆ. ಕಲ್ಲಿನ ಒಂದು ಮೂಲೆಯಲ್ಲಿ ರಕ್ತ ಇತ್ತು ಎಂದು. ಪೊಲೀಸರು ಮಹಜರ್ ಗೆ ಬಂದಾಗ ಮು.ಮಾ.6 ಕಲ್ಲಿನ ಒಂದು ಮೂಲೆಯಲ್ಲಿ ರಕ್ತ ಇತ್ತು, ಅದು ಎಡಗಡೆ ಇತ್ತೋ ಅಥವಾ ಬಲಗಡೆ ಇತ್ತೋ ಅನ್ನುವುದನ್ನು ನಾನು ಗಮನಿಸಲಿಲ್ಲ. ಮು.ಮಾ.6 ಕಲ್ಲಿನ ಒಂದು ಭಾಗಕ್ಕಿಂತ ಇನ್ನೊಂದು ಭಾಗ ಅಗಲವಾಗಿದೆ ಎಂದರೆ ಸರಿಯಲ್ಲ. ಮು.ಮಾ.6 ಕಲ್ಲಿನ ಒಂದು ತುದಿಯಭಾಗ ಕಡಿಮೆ ಅಗಲ ಇದ್ದು ಹಾಗುಾ ಇನ್ನೊಂದು ತುದಿಯ ಭಾಗ ಹೆಚ್ಚಿನ ಅಗಲ ಇದೆ ಎಂದರೆ ಸರಿಯಲ್ಲ. ಗಲಾಟೆಯಲ್ಲಿ ನನಗೆ ಎರಡು ಕೈಗಳ ಭಾಗದ, ಎಡಕಿವಿ, ಕತ್ತು ಮತ್ತು ಸೊಂಟ ಹಾಗುಾ ಇತರೆ ದೇಹದ ಸುಮಾರು ಕಡೆ ಏಟು ಬಿದ್ದಿತ್ತು. ನಾನು ಇದ್ದಂತ ಮನೆಯಿಂದ ಮಂಡ್ಯ ಸರ್ಕಾರಿ ಆಸ್ಪತ್ರೆಗೆ ಎಷ್ಟು ಕಿ.ಮಿ ಇದೆ ಅಂತ ಹೇಳಲು ಆಗುವುದಿಲ್ಲ. ಅರ್ದ ಗಂಟೆ ಒಳಗೆ ನಮ್ಮ ಮನೆಯಿಂದ ಮಂಡ್ಯ ಸರ್ಕಾರಿ ಆಸ್ಪತ್ರೆಗೆ ಹೋಗಬಹುದು. ಮಂಡ್ಯ ಸರ್ಕಾರಿ ಆಸ್ಪತ್ರೆಯಿಂದ ಮಂಡ್ಯ ವೆಸ್ಟ್ ಪೊಲೀಸ್ ಠಾಣೆಗೆ ಒಂದರಿಂದ ಒಂದುವರೆ ಕಿ.ಮಿ ಆಗುತ್ತದೆ ಎಂದರೆ ಸಾಕ್ಷಿಯು ಆಗಬಹುದೇನೋ ಎಂದು ಹೇಳುತ್ತಾರೆ. ನಮ್ಮ ಮನೆ ಇರುವ ಬಡಾವಣೆಯಿಂದ ಬಂದರೆ ಮೊದಲಿಗೆ ಪೂಲೀಸ್ ಠಾಣೆ ಸಿಗುತ್ತದೆ ನಂತರ ಆಸ್ಪತ್ರೆ ಸಿಗುತ್ತದೆ. ನಮ್ಮ ಮನೆ ಹತ್ತಿರ ಮರಿಗೌಡ ಬಡಾವಣೆಯಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ ಎಂದರೆ ಸರಿ. ನಾನು ಈ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಲಿಲ್ಲ. ಮರಿಗೌಡ ಬಡಾವಣೆಯಲ್ಲಿ ಇರುವ ನಮ್ಮ ಮನೆಯಿಂದ ಪೊಲೀಸ್ ಠಾಣೆಗೆ ಎರಡು ಕಿ.ಮಿ ಇದೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಮರಿಗೌಡ ಬಡಾಣೆಯಿಂದ ಆಸ್ಪತ್ರೆಗೆ ಆಟೋದಲ್ಲಿ ಹೋದೆವು. ಆಸ್ಪತ್ರೆಗೆ ಬಂದಾಗ ಸಮಯ 9.15 ರಿಂದ 9.45 ಗಂಗೆ ಸಮಯ ಆಗಿರಬಹುದು. ನನಗೆ ರಕ್ತ ಗಾಯಗಳು ಆಗಿತ್ತು. ಆಸ್ಪತ್ರೆಗೆ ಹೋದಾಗ ಕೈಗೆ ಬ್ಯಾಂಡೇಜ್ ಮಾಡಿದರು ಹಾಗೂ ಗಾಯಗಳಿಗೆ ಔಷಧಿ ಹಾಕಿ ಚಿಕಿತ್ಸೆ ನೀಡಿದರು. ಪೊಲೀಸರು ನಮ್ಮ ಮನೆಯ ಮುಂದೆ ಮಹಜರ್ ಮಾಡಿದಾಗ ಸಮಯ ಮದ್ಯಾಹ್ಞ 2.00 ಗಂಟೆಯಿಂದ 3.30 ಒಳಗೆ ಇದ್ದಿರಬಹುದು , ಆ ಸಮಯದಲ್ಲಿ ನಿಪಿ.5 ರಿಂದ 10 ಫೋಟೋಗಳನ್ನು ಪೊಲೀಸರು ತೆಗೆದಿದ್ದರು ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಫೋಟೋಗಳಲ್ಲಿ ನನ್ನ ಕೈಗೆ ಬ್ಯಾಂಡೇಜ್, ನನ್ನ ಕಿವಿಗೆ ಚಿಕಿತ್ಸೆ ಮಾಡಿದ ಬಗ್ಗೆ ಅಥವಾ ನನಗೆ ಆಗಿದ್ದ ಗಾಯಳಿಗೆ ಚಿಕಿತ್ಸೆ ಮಾಡಿದ ಬಗ್ಗೆ ಈ ಫೋಟೋದಲ್ಲಿ ಇಲ್ಲ ಎಂದರೆ ಸರಿ.ಮಹಜರ್ ಮಾಡಿದಂತ

ಕಾಲಕ್ಕೆ ನನಗೆ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಗಾಯಗಳು ಆಗಿದೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಮನೆಯ ಮುಂದೆ ಮಹಜರ್ ಮಾಡಿದ ನಂತರ ನಿಪಿ.12, 13, 14, 15, 16 ಹಾಗೂ 17 ಫೋಟೋಗಳಲ್ಲಿ, ನಾನು ಕೈಗೆ ಬ್ಯಾಂಡೇಜನ್ನು ಕಟ್ಟಿಕೊಂಡು ನಾಟಕ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಗಾಯಗಳು ಆಗಿದ್ದಾಗ ನನ್ನ ಬಟ್ಟೆಗೆ ರಕ್ತವಾಗಿತ್ತು . ನನ್ನ ತಂದೆಯನ್ನು ಜೊತೆಯಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದಂತ ಸಂದರ್ಭದಲ್ಲಿ , ನನ್ನ ತಂದೆಯ ರಕ್ತ ನನ್ನ ಬಟ್ಟೆಗೆ ಆಗಿತ್ತೋ ಇಲ್ಲವೋ ಅನ್ನುವುದನ್ನು ನಾನು ಗಮನಿಸಲಿಲ್ಲ. ಸದರಿ ಆಟೋ ಯಾರದು ಅಂತ ಗೊತ್ತಿಲ್ಲ. ಸದರಿ ಆಟೋ ಓಡಿಸಿಕೊಂಡು ಬಂದವರ ಹೆಸರು ರಾಘು, ಅವರು ನಮ್ಮ ಊರಿನವರು.

ನನ್ನ ದೂರಿನಲ್ಲಿ, ಜಯಣ್ಣ ಕೂಡ ನಮ್ಮ ಜೊತೆಯಲ್ಲಿ ಬಂದಿದ್ದರು ಅಂತ ಹೇಳಿಲ್ಲ. ನಿಪಿ.1 ದೂರಿನ 3 ನೇ ಪುಟದಲ್ಲಿ , ಲಕ್ಷ್ಮಿ, ಪುಟ್ಟೀರಮ್ಮ, ಗೀತಾರವರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಬೇಕಾಗಿ ಕೋರಿಕೆ ಅಂತ ಮೊದಲು ಬರೆದಿದ್ದು ಹಾಗೂ ಈ ದೂರನ್ನು ಕೊಟ್ಟ ನಂತರ ಮತ್ತೆ ದೂರಿನಲ್ಲಿ " ಮೇಲ್ಕಂಡವರು ಮಾರಣಾಂತಿಕ ಹಲ್ಲೆ ಮಾಡಲು ನಿವೃತ ಪೊಲೀಸ್ ಅಧಿಕಾರಿಯಾದ ಚಿಕ್ಕ ವಿರಭದ್ರ ರವರ ಕುಮ್ಮಕು ನೀಡಿರುತ್ತಾರೆ ಅದರಿಂದ ಚಿಕ್ಕವೀರಭದ್ರರವರ ಮೇಲೂ ಸಹಾ ಕ್ರಮ ಜರುಗಿಸಲು ಕೋರಿಕೆ " ಅಂತ ಸೇರಿಸಿದ್ದೇನೆ ಅಂದರೆ ಸರಿಯಲ್ಲ . ಪೊಲೀಸರು ದೂರನ್ನು ಕೊಟ್ಟ ನಂತರ ಮಹಜರನ್ನು ಮಾಡಿದ ಮೇಲೆ ಪುನಃ ನನ್ನನ್ನು ಕರೆದು ವಿಚಾರಣೆ ಮಾಡಿದರು. ನನ್ನ ಮುಂದುವರಿದ ಹೇಳಿಕೆಯಲ್ಲಿ , ಜಯಣ್ಣ ನನ್ನ ಜೊತೆಯಲ್ಲಿ ಆಸ್ಪತ್ರೆಗೆ ಬಂದಿದ್ದರು ಅಂತ ಹೇಳಿಲ್ಲ ಎಂದರೆ ಸರಿ. ಕೃತ್ಯ ನಡೆದಿಲ್ಲ ಹಾಗೂ ಕೃತ್ಯದಲ್ಲಿ ನನಗೆ ಹಾಗೂ ನನ್ನ ತಂದೆಗೆ ಪೆಟ್ಟು ಆಗಿರಲ್ಲಿ ಎಂದರೆ ಸರಿಯಲ್ಲ. ಆರೋಪಿತರು , ನನ್ನ ತಂದೆಯ ಮೇಲೆ ಸಿವಿಲ್ ವ್ಯಾಜ್ಯವಾನ್ನು ಹಾಕಿದ್ದರು ಎಂದರೆ ಸರಿ. ಸದರಿ ಸಿವಿಲ್ ವ್ಯಾಜ್ಯದಲ್ಲಿ ಎಲ್ಲಾ ಆರೋಪಿತರಿಗೂ ಆಸ್ತಿಯಲ್ಲಿ ಸಮ ಭಾಗ ಬರಬೇಕು ಎಂದು ಆದೇಶವಾಗಿತ್ತು ಎಂದರೆ ಗೊತ್ತಿಲ್ಲ. ನನ್ನ ತಂದೆ ಮತ್ತು ತಾಯಿಯವರ ಕುಮ್ಮಕ್ಕಿನ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಮುಂದೆ ಯಾವುದೇ ರೀತಿಯ ಮಹಜರನ್ನು ಮಾಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ </u>ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಮಂಡ್ಯ.